

بسم اللهِ الرّحمٰن الرّحيم

# ತಹ್‌ರೀಕ್ ಜದೀದ್ ಹೊಸ ವರ್ಷದ ಆರಂಭ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 06–11–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

**ಲನ್‌ತನಾಲುಲ್ ಬಿರ್ರ ಹತ್ತಾತುನ್‌ಫಿಖೂ ಮಿಮ್ಮಾ ತುಹಿಬ್ಬೂನ್, ವಮಾ ತುನ್‌ಫಿಖೂ ಮಿನ್ ಶೈಯಿನ್ ಫ ಇನ್ನಲ್ಲಾಹ ಬಿಹೀ ಅಲೀಮ್.**

ನಿಮಗೆ ಪ್ರಿಯವಾದವುಗಳಿಂದ (ದೇವಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು. (ಪವಿತ್ರ ಖುರ್‌ಆನ್ 3: 93)

ಪ್ರತಿಯೊಬ್ಬ ಸತ್ಯವಿಶ್ವಾಸಿ ಒಳಿತುಗಳನ್ನು ಮಾಡಿ ಅಲ್ಲಾಹನ ಸಾಮೀಪ್ಯ ಗಳಿಸಲು ಬಯಸುತ್ತಾನೆ. ಅಲ್ಲಾಹನು ಪವಿತ್ರ ಖುರ್‌ಆನಿನ ಈ ವಚನದಲ್ಲಿ ಹೇಳಿರುವುದೇನೆಂದರೆ, ನೀವು ಒಳಿತನ್ನು ಮಾಡಲು ಬಯಸುವುದಾದರೆ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಬಯಸುವುದಾದರೆ, ನೀವು ನೆನಪಿಡಿರಿ ಬಲಿದಾನ ನೀಡುವ ಮೂಲಕವೇ ಒಳಿತನ್ನು ಪಡೆಯಲು ಸಾಧ್ಯ. ನೀವು ಅಲ್ಲಾಹನ ಸಂಪ್ರೀತಿ ಗಳಿಸಲು ತ್ಯಾಗಗಳನ್ನು ಮಾಡಿರಿ. ನಿಮಗೆ ಬಹಳ ಹೆಚ್ಚು ಪ್ರಿಯವಾದುದನ್ನು ನೀವು ಬಲಿದಾನವಾಗಿ ನೀಡಿರಿ. ನಿಮಗೆ ಲಾಭಕೊಡುವಂತಹದನ್ನು ನೀವು ಬಲಿದಾನವಾಗಿ ನೀಡಿರಿ. ನಿಮಗೆ ಸುಖಸಂತೋಷ ನೀಡುವ ವಸ್ತುವನ್ನು ಬಲಿಯರ್ಪಿಸಿರಿ. ನಿಮ್ಮ ಸಂತಾನಗಳ ಭಾವಿ ಜೀವಿತವನ್ನು ಸುಖಮಯವನ್ನಾಗಿ ಮಾಡುವುದೆಂದು ನೀವು ಭಾವಿಸುವ ವಸ್ತುಗಳನ್ನು ನೀವು ಬಲಿದಾನ ನೀಡಿರಿ. ಈ ಎಲ್ಲ ಬಲಿದಾನಗಳು ಸಾಮಾನ್ಯವಾದ ಬಲಿದಾನಗಳೇನೂ ಅಲ್ಲ. ಹಣ ಮನುಷ್ಯನಿಗೆ ಯಾವಾಗಲೂ ಪ್ರಿಯಕರವಾಗಿರುತ್ತದೆ. ಅದನ್ನು ಅಲ್ಲಾಹನು ಸ್ವತಃ ಪ್ರಸ್ತಾಪಿಸಿದ್ದಾನೆ. ಬೆಳ್ಳಿ, ಬಂಗಾರ, ಜಾನುವಾರುಗಳು, ಭೂ ಸ್ವತ್ತು, ಹೊಲಗಳು, ತೋಟಗಳು ಮನುಷ್ಯನಿಗೆ ಬಹಳ ಪ್ರಿಯವಾದವುಗಳಾಗಿವೆ. ಅವು ಮನುಷ್ಯನಿಗೆ ಅಭಿಮಾನಾರ್ಹವಾಗಿವೆ. ಪ್ರತಿಯೊಂದು ವರ್ಗದ ಜನರಲ್ಲೂ ಸಂಪತ್ತಿನ ಬಗ್ಗೆ ಪ್ರೀತಿ ಇರುತ್ತದೆ. ಜೀವನಕ್ಕೆ ಆವಶ್ಯಕವಾದುವು ಎಂಬ ಹೆಸರಿನಲ್ಲಿ ಹೊಸ ಹೊಸ ವಸ್ತುಗಳ ಬಗ್ಗೆ ಅಭಿಲಾಷೆ ಅತ್ಯಂತ ಹೆಚ್ಚಾಗುತ್ತಿದೆ. ಲೌಕಿಕತೆ ತನ್ನ ಅತ್ಯುನ್ನತ ಮಟ್ಟವನ್ನು ತಲಪಿದೆ. ಇಂತಹ ಪರಿಸ್ಥಿತಿಯಲ್ಲಿ ನಿಮಗೆ ಪ್ರಿಯವಾದುದರಿಂದ ಖರ್ಚು ಮಾಡಿರಿ, ನಿಮ್ಮ ಅಭಿಲಾಷೆಗಳನ್ನು ಬಲಿಯರ್ಪಿಸಿರಿ, ನಿಮ್ಮ ಸುಖಸೌಲಭ್ಯಗಳನ್ನು ಬಲಿಯರ್ಪಿಸಿರಿ ಎಂದು ಹೇಳುವುದು ಸಾಮಾನ್ಯ ಲೌಕಿಕವಾದಿಗಳಾದ ಜನರಿಗೆ ಒಂದು ಆಶ್ಚರ್ಯಕರವಾದ ಸಂಗತಿಯೆಂದು ತೋರಬಹುದು. ಆದರೆ ಈ ಕಾಲಘಟ್ಟದಲ್ಲೂ ಎಂತಹ ಜನರಿದ್ದಾರೆಂದರೆ, ಪವಿತ್ರ ಖುರ್‌ಆನಿನ ಉಪದೇಶಗಳ ಜ್ಞಾನವನ್ನು ಹೊಂದಿ ಅದರ ಆದೇಶಗಳ ಪ್ರಕಾರ ಕ್ರಿಯಾಶೀಲರಾಗಲು ಪ್ರಯತ್ನಿಸುತ್ತಿರುವ ಜನರು ಸಹ ಇದ್ದಾರೆಂದು ಈ ಲೌಕಿಕವಾದಿಗಳಿಗೆ ತಿಳಿದಿಲ್ಲ. ಅವರು ಎಂತಹ ಒಳಿತನ್ನು ಮಾಡಲು ಪ್ರಯತ್ನ ಮಾಡುತ್ತಾರೆಂದರೆ ಅದು ಅನ್ಯರ ದೃಷ್ಟಿಯಲ್ಲಿ ಅತ್ಯಂತ ಉನ್ನತ ಮಟ್ಟದ ಬಲಿದಾನವಾಗಿದೆ. ಹೀಗೆ ಬಲಿದಾನ ಮಾಡುವವರು ತಮಗೆ ಪ್ರಿಯವಾದುದು ಏನೆಂದು ನೋಡುವುದಿಲ್ಲ. ಅವರಿಗೆ ಅತ್ಯಂತ ಪ್ರಿಯವಾದುದು ಅಲ್ಲಾಹನ ಆಜ್ಞೆಯನ್ನು ಪಾಲಿಸುವುದಾಗಿದೆ. ತಖ್ವವನ್ನು ವರ್ಧಿಸುವಂತಹ ಪ್ರಯತ್ನ ಅವರು ಮಾಡುತ್ತಾರೆ. ಈ ಬಲಿದಾನ ನೀಡುವ ಜನರು ಯಾರೆಂದು ಲೋಕದ ಬಹಳ ಭಾಗದ ಜನರಿಗೆ ತಿಳಿದಿಲ್ಲ. ಅವರೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನೂ ಈ ಕಾಲದ ಇಮಾಮರೂ ಆಗಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧ ಜೋಡಿಸಿ ನೈಜ ಒಳಿತು ಗಳಿಸುವುದು ಹೇಗೆಂದು ತಿಳಿದು ಕೊಂಡವರಾಗಿದ್ದಾರೆ. ಆ ಜನರು ಒಳಿತನ್ನು ಗಳಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನುಗ್ರಹ ಪಡೆದ ಒಳಿತಿನ ಪ್ರಕಾಶಮಾನವಾದ ಮಿನಾರುಗಳಿಂದ ಸರಿಯಾದ ಮಾರ್ಗದ ಬಗ್ಗೆ ಮಾರ್ಗದರ್ಶನ ಪಡೆದವರಾಗಿದ್ದಾರೆ. ಅವರ ಬಲಿದಾನದ ಮಟ್ಟ ಬಹಳ ವಿಸ್ಮಯಕರವಾಗಿತ್ತು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ– ಪವಿತ್ರ ಖುರ್‌ಆನಿನ **ಲನ್‌ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್** ಎಂಬ ವಚನ ಅವತೀರ್ಣವಾದಾಗ ಹಝ್ರತ್ ಅಬೂ ತಲ್‌ಹ(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಹೋಗಿ– ನನಗೆ ಅತ್ಯಂತ ಪ್ರಿಯವಾದುದು ಬೈರೂಹದ ನನ್ನ ತೋಟವಾಗಿದೆ. ನಾನು ಅದನ್ನು ಅಲ್ಲಾಹನ ಮಾರ್ಗದಲ್ಲಿ ಕೊಡುತ್ತೇನೆ ಎಂದು ನಿವೇದಿಸಿಕೊಂಡರು. ಇಂತಹ ಜನರು ಪ್ರಕಾಶಮಾನವಾದ ನಕ್ಷತ್ರಗಳಾಗಿದ್ದರು. ಅವರು ಒಳಿತಿನ ಮಾರ್ಗವನ್ನು ನಿರ್ಧರಿಸುವವ ರಾಗಿದ್ದರು.

ಈ ಸಹಾಬರ ಉದಾಹರಣೆ ನೀಡುತ್ತಾ ಈ ಕಾಲಘಟ್ಟದ ಇಮಾಮರು ನಮಗೆ ಪದೇ ಪದೇ ಬಲಿದಾನ ನೀಡುವ ಬಗ್ಗೆ ಲಕ್ಷ್ಯ ನೀಡಲು ಹೇಳಿದರು. ಅವರು ತನ್ನ ಅನೇಕ ಉಪದೇಶಗಳಲ್ಲಿ ಪವಿತ್ರ ಖುರ್‌ಆನಿನ ಈ ಉಪದೇಶಗಳನ್ನೂ ಆಜ್ಞೆಗಳನ್ನೂ ವಿಶದವಾಗಿ ವಿವರಿಸಿದರು. ಒಳಿತನ್ನು ಗಳಿಸುವ ಬಗ್ಗೆ ಅರಿವನ್ನೂ ನಮಗೆ ನೀಡಿದರು. ಒಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ನಿರರ್ಥಕ ವಸ್ತುಗಳನ್ನು ಖರ್ಚು ಮಾಡುವವನು ತಾನು ಒಳಿತನ್ನು ಮಾಡಿದೆ ಎಂದು ವಾದಿಸಲು ಸಾಧ್ಯವಿಲ್ಲ. ಒಳಿತಿನ ಬಾಗಿಲು ಸಂಕುಚಿತವಾಗಿದೆ. ಆದುದರಿಂದ ನಿರರ್ಥಕ ವಸ್ತುಗಳನ್ನು ಖರ್ಚು ಮಾಡುವವನು ಅದರ ಮೂಲಕ ಪ್ರವೇಶಿಸಲಾರನೆಂದು ನೀವು ನೆನಪಿಟ್ಟು ಕೊಳ್ಳಿರಿ. ಯಾಕೆಂದರೆ, ಪವಿತ್ರ ಖುರ್‌ಆನ್ ಹೇಳುವುದು **ಲನ್‌ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್** ನೀವು ನಿಮಗೆ ಅತ್ಯಂತ ಪ್ರಿಯಕರವಾದುದನ್ನು ಖರ್ಚು ಮಾಡುವ ತನಕ ಅಲ್ಲಾಹನಿಗೆ ಪ್ರಿಯರಾದವರೆಂಬ ಪದವಿಯನ್ನು ಪಡೆಯಲಾರಿರಿ ಎಂದಾಗಿದೆ. ನೀವು ಕಷ್ಟಪಡಲು ಬಯಸುವುದಿಲ್ಲವಾದರೆ ನೀವು ನೈಜ ಒಳಿತನ್ನು ಅವಲಂಬಿಸಲು ಬಯಸುವುದಿಲ್ಲವಾದರೆ ನೀವು ಹೇಗೆ ತಾನೆ ಜಯಶಾಲಿಗಳೂ ಉದ್ದೇಶ ಲಕ್ಷ್ಯಗಳಿಸಿದವರೂ ಆಗ ಬಲ್ಲಿರಿ. ಏನು, ಸಹಾಬರಿಗೆ ದೊರಕಿದ ಆಧ್ಯಾತ್ಮಿಕ ಪದವಿಗಳು ಅವರಿಗೆ ಉಚಿತವಾಗಿ ಲಭಿಸದವುಗಳೇ? ಲೌಕಿಕ ಪದವಿಗಳು ಲಭಿಸಬೇಕಾದರೆ ಎಷ್ಟೆಲ್ಲಾ

ಖರ್ಚುಗಳನ್ನೂ ಕಷ್ಟಗಳನ್ನೂ ಸಹಿಸಬೇಕಾಗುತ್ತದೆ. ಅನಂತರ ಒಂದು ಸಾಮಾನ್ಯ ಪದವಿ ದೊರಕುತ್ತದೆ. ಅದರಿಂದ ಸಮಾಧಾನ ಮತ್ತು ಮಾನಸಿಕ ಶಾಂತಿ ಲಭಿಸುವುದಿಲ್ಲ. ನೀವು ಯೋಚಿಸಿರಿ, ಸಹಾಬರಿಗೆ ದೊರೆತ ರಝಿಯಲ್ಲಾಹು ಅನ್‌ಹು ಎಂಬ ಪದವಿ ಹೇಗೆ ದೊರಕಿತು. ಅದು ಸಮಾಧಾನ ಮತ್ತು ಶಾಂತಿಯನ್ನು ಹೃದಯಕ್ಕೆ ನೀಡುವಂತಹದ್ದೂ ಅಲ್ಲಾಹನು ಅದರ ಬಗ್ಗೆ ಸಂಪ್ರೀತನಾದ ಬಗ್ಗೆ ಚಿಹ್ನೆಯೂ ಆಗಿದೆ. ಅದು ಅವರಿಗೆ ಸುಮ್ಮನೆ ಸುಲಭವಾಗಿ ದೊರಕಿತೆ? ಆದುದರಿಂದ ವಾಸ್ತವಿಕ ವಿಷಯವೇನೆಂದರೆ, ಯಥಾರ್ಥ ಸಂತೋಷ ನೀಡುವಂತಹ ಅಲ್ಲಾಹನ ಸಂಪ್ರೀತಿಯು ತಾತ್ಕಾಲಿಕ ಕಷ್ಟಗಳನ್ನು ಸಹಿಸದೆ ದೊರಕಲಾರದು. ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ತಾತ್ಕಾಲಿಕ ಕಷ್ಟಗಳ ಬಗ್ಗೆ ಗಮನ ಹರಿಸದವರು ಅನುಗ್ರಹೀತರಾಗಿದ್ದಾರೆ. ಏಕೆಂದರೆ ತಾತ್ಕಾಲಿಕ ಕಷ್ಟದ ನಂತರ ಸತ್ಯವಿಶ್ವಾಸಿಗೆ ಶಾಶ್ವತ ಸಂತೋಷ ಮತ್ತು ಶಾಶ್ವತ ಸುಖ ಲಭಿಸುತ್ತದೆ.

ಒಮ್ಮೆ ಜನರಿಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮನುಷ್ಯನು ಸಂಪತ್ತನ್ನು ಬಹಳ ಪ್ರೀತಿಸುತ್ತಾನೆ. ಇದೇ ಕಾರಣದಿಂದ ಸ್ವಪ್ನ ವ್ಯಾಖ್ಯಾನದ ಗ್ರಂಥದಲ್ಲಿ ಒಬ್ಬನು ಸ್ವಪ್ನದಲ್ಲಿ ತನ್ನ ಯಕೃತನ್ನು ತೆಗೆದು ಇನ್ನೊಬ್ಬನಿಗೆ ಕೊಡುವುದಾಗಿ ಸ್ವಪ್ನ ಕಂಡರೆ ಅದರ ಅರ್ಥ ಸಂಪತ್ತು ಕೊಡುವುದು ಎಂದು ಬರೆಯಲಾಗಿದೆ. ಆದುದರಿಂದ ನಿಮಗೆ ಅತ್ಯಂತ ಪ್ರಿಯವಾದುದನ್ನು ಖರ್ಚು ಮಾಡುವ ತನಕ ನೀವು ವಾಸ್ತವಿಕ ಒಳಿತನ್ನು ಗಳಿಸಲಾರಿರಿ ಎಂದು ಬರೆಯಲ್ಪಟ್ಟಿದೆ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮನುಷ್ಯನ ಸಾತ್ವಿಕತೆ ಮತ್ತು ತಖ್ವದ ಉನ್ನತ ಮಟ್ಟವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಂತಹ ಒಂದು ಜಮಾಅತನ್ನು ಸ್ಥಾಪಿಸಿದರೆಂದರೆ, ಆ ಜಮಾಅತಿನ ಜನರು ಅವರ ಉಪದೇಶಗಳನ್ನು ಆಲಿಸಿ ಮುಖ ತಿರುಗಿಸುವವರಾಗಲಿಲ್ಲ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಆಲಿಸಿದ ನಂತರ ಬಲಿದಾನಗಳ ಉನ್ನತ ಮಟ್ಟವನ್ನು ಸ್ಥಾಪಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ವತಃ ಇಂತಹ ಜನರ ಬಗ್ಗೆ ಪ್ರಸ್ತಾಪಿಸಿದ್ದರು. ಒಮ್ಮೆ ಅವರು ಹೀಗೆ ಹೇಳಿದರು: ನಮ್ಮ ಜಮಾಅತಿನಲ್ಲಿ ಎಂತಹ ಜನರು ಇದ್ದಾರೆಂದರೆ ಅವರ ಮೈಯ್ಯಲ್ಲಿ ಸಾಕಷ್ಟು ಉಡುಪುಗಳಿರುವುದಿಲ್ಲ. ಅವರು ಚಾದರ್ ಮತ್ತು ಪೈಜಾಮ ಬಹಳ ಕಷ್ಟಪಟ್ಟು ದೊರಕಿಸಿ ಕೊಳ್ಳುತ್ತಾರೆ. ಅವರಿಗೆ ಆಸ್ತಿಯೇನೂ ಇರುವುದಿಲ್ಲ. ಅಂತಹ ಜನರ ಎಣೆಯಿಲ್ಲದ ನಿಷ್ಠೆ ಮತ್ತು ಪ್ರೀತಿ ವಿಶ್ವಾಸಗಳನ್ನು ಕಾಣುವಾಗ ಬಹಳ ಆಶ್ಚರ್ಯಪಡುತ್ತೇನೆ. ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮ್ಮ ಜಮಾಅತಿನಲ್ಲಿ ಕಂಡುಬರುವ ಬದಲಾವಣೆ ಮತ್ತು ಅಭಿವೃದ್ಧಿ ಈ ಕಾಲದಲ್ಲಿ ಬೇರೆ ಯಾರಲ್ಲೂ ಕಂಡು ಬರುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ನೇರವಾಗಿ ಅನುಗ್ರಹ ಪಡೆದವರು ಅಂತಹ ಉನ್ನತ ಸ್ಥಾನ ಪಡೆದರು ಮತ್ತು ಅವರ ಪ್ರೀತಿಗೆ ಪಾತ್ರರಾದರು. ಏನು, ಈ ನಿಷ್ಠೆ ಮತ್ತು ಪ್ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಗತಿಸಿ ಹೋದ ನಂತರ ಕೊನೆಗೊಂಡಿತೆ? ಖಂಡಿತವಾಗಿಯೂ ಇಲ್ಲ. ಈಗ ಸಹ ಅಂತಹ ತ್ಯಾಗ ಮನೋಭಾವದ ಪುರುಷರೂ ಮಹಿಳೆಯರೂ ಮಕ್ಕಳೂ ಈ ಜಮಾಅತ್‌ನಲ್ಲಿ ಇದ್ದಾರೆ. ಅವರು ನಿಷ್ಠೆಯಲ್ಲಿ ಬಹಳ ಮುಂದೆ ಸಾಗಿದ್ದಾರೆ. ಕೇವಲ ಕೆಲವು ಸ್ಥಳಗಳಲ್ಲಿ ಮಾತ್ರ ಇಂತಹ ಜನರಿದ್ದಾರೆಂದು ಭಾವಿಸಬೇಡಿರಿ. ಲೋಕದ ವಿವಿಧ ಭಾಗಗಳಲ್ಲಿ ಸಾವಿರಾರು ಇಂತಹ ಉದಾಹರಣೆಗಳಿವೆ. ಅವರು **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್** ಎಂಬ ಪವಿತ್ರ ಖುರ್‌ಆನಿನ ವಚನದ ಬಗ್ಗೆ ವಾಸ್ತವಿಕ ಜ್ಞಾನ ಗಳಿಸಿದವರಾಗಿದ್ದಾರೆ. ಅವರು ತ್ಯಾಗ ಬಲಿದಾನಗಳಲ್ಲಿ ಮುಂದೆ ಮುಂದೆ ಸಾಗುತ್ತಿದ್ದಾರೆ. ಇಂತಹ ನಿಷ್ಠಾವಂತರಾದ ಜನರು ಮಾಡಿದ ತ್ಯಾಗಗಳ ಕೆಲವು ಉದಾಹರಣೆಗಳನ್ನು ಈಗ ನಾನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಕೆಲವರು ಕಷ್ಟಪಟ್ಟು ಬಟ್ಟೆಬರೆ ದೊರಕಿಸಿಕೊಳ್ಳುತ್ತಾರೆ. ಆದರೆ ಅವರು ನಿಷ್ಠಾವಂತರಾಗಿರುತ್ತಾರೆ. ಅದರ ಒಂದು ಉದಾಹರಣೆ ಹೀಗಿದೆ: ಸಿಯರ್ರಾಲಿಯೋನಿನ ನಮ್ಮ ಮುಬಲ್ಲಿಗ್ ವರದಿ ಮಾಡುತ್ತಾರೆ: ಮುಂಬಾರೋ ಎಂಬ ಜಮಾಅತಿನಲ್ಲಿ ಒಬ್ಬ ಅಂಧ ಮಹಿಳೆ ತಹ್‌ರೀಕ್ ಜದೀದ್ ಚಂದವಾಗಿ ಎರಡು ಸಾವಿರ ಲಿಯೋನ್ ವಾಗ್ದಾನ ಬರೆಯಿಸಿದ್ದರು. ಚಂದ ವಸೂಲಿಗೆ ಅವರ ಬಳಿಗೆ ಹೋದಾಗ ಅವರು ಹೇಳಿದರು– ನನಗೆ ಚಂದ ಹೇಗೆ ನೀಡುವುದೆಂಬ ಚಿಂತೆ ಇತ್ತು. ನನಗೆ ಚಂದ ಕೊಡುವಷ್ಟು ಆದಾಯ ಸಹ ಇರಲಿಲ್ಲ. ಹೀಗಿದ್ದರೂ ವಾಗ್ದಾನ ಮಾಡಿದ ಚಂದ ಕೊಡಲು ಸಾಧ್ಯವಾಗುವಂತೆ ನಾನು ದುಆ ಮಾಡಲು ತೊಡಗಿದೆ. ಹೀಗಿರಲಾಗಿ ಒಬ್ಬ ಅಪರಿಚಿತ ವ್ಯಕ್ತಿ ಆ ಗ್ರಾಮಕ್ಕೆ ಬಂದರು. ನಾನು ಅವರೊಂದಿಗೆ ಹೇಳಿದೆ ನನ್ನ ಬಳಿ ತಲೆಗೆ ಹಾಕುವ ಒಂದು ಬಟ್ಟೆ ಇದೆ. ನೀವು ಎರಡು ಸಾವಿರ ಲಿಯೋನಿಗೆ ಈ ಬಟ್ಟೆ ಖರೀದಿಸಿರಿ. ಅವರು ಹೇಳುತ್ತಾರೆ– ಆ ಬಟ್ಟೆ ಹತ್ತು ಹದಿನೈದು ಸಾವಿರ ಲಿಯೋನ್ ಬೆಲೆ ಬಾಳುವುದಾಗಿತ್ತು. ಆಗ ವ್ಯಕ್ತಿ ಕೇಳಿದರು– ಇಷ್ಟು ಅಗ್ಗದ ದರದಲ್ಲಿ ಏಕೆ ಮಾರಾಟ ಮಾಡುತ್ತಿರುವಿರಿ ಎಂದು. ಆಗ ಆ ಮಹಿಳೆ ಹೇಳಿದರು: ತಹ್‌ರೀಕ್ ಜದೀದ್ ಚಂದ ಕೊಡಲಿಕ್ಕಿದೆ. ನನ್ನ ಬಳಿ ಈಗ ಹಣವಿಲ್ಲ. ಆದುದರಿಂದ ಎರಡು ಸಾವಿರ ಲಿಯೋನ್‌ಗೆ ಮಾರುತ್ತಿದ್ದೇನೆ. ಆ ವ್ಯಕ್ತಿ ಆ ಬಟ್ಟೆ ಖರೀದಿಸಿ ಎರಡು ಸಾವಿರ ಲಿಯೋನ್ ಆ ಮಹಿಳೆಗೆ ಕೊಟ್ಟರು. ಆ ವ್ಯಕ್ತಿ ಬಹಳ ಸಭ್ಯರಾಗಿದ್ದರು. ನಂತರ ಆ ಬಟ್ಟೆಯನ್ನು ಆ ಮಹಿಳೆಗೆ ಹಿಂದಿರುಗಿಸಿ ಈ ಬಟ್ಟೆ ನನ್ನ ಪರವಾಗಿ ನೀವು ಇಟ್ಟುಕೊಳ್ಳಿರಿ ಎಂದು ಹೇಳಿದರು. ನೋಡಿರಿ, ಆಫ್ರಿಕದ ದೂರದ ದೇಶದಲ್ಲಿರುವ ಒಬ್ಬ ಅವಿದ್ಯಾವಂತ ಮಹಿಳೆಯ ಸ್ಥಿತಿ ಹೀಗಿದೆ. ನಿಶ್ಚಯವಾಗಿಯೂ ಆ ಅಂಧ ಮಹಿಳೆಯ ನಿಷ್ಠೆ ಅಲ್ಲಾಹನೇ ಸೃಷ್ಟಿಸಿದ್ದಾಗಿದೆ.

ಭಾರತದ ರಾಜಸ್ಥಾನದ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಇಲ್ಲಿ ಬೋಲಾಬಾಲಿ ಎಂಬಲ್ಲಿ ಒಂದು ಜಮಾಅತ್ ಇದೆ. ಅಲ್ಲಿ ಒಬ್ಬ ವ್ಯಕ್ತಿ ಇದ್ದಾರೆ. ಅವರ ಪ್ರಾಯ 65 ವರ್ಷ. ಹೆಚ್ಚಾಗಿ ರೋಗಿಯಾಗಿರುತ್ತಾರೆ. ಆದಾಯವೇನೂ ಇಲ್ಲ. ಅವರೊಂದಿಗೆ ಹೀಗೆ ಹೇಳಲಾಯಿತು. ನೀವು ಸ್ವಲ್ಪ ಹಣ ಚಂದ ಬರೆಸಿರಿ. ಸತ್ಯವಿಶ್ವಾಸಿಗಳಿಗೆ ಇದು ಕಡ್ಡಾಯವಾಗಿದೆ ಎಂದು. ಆಗ ಅವರು ಒಂದು ಸಾವಿರದ ಐವತ್ತು ರೂಪಾಯಿಗಳನ್ನು ಚಂದವಾಗಿ ನೀಡಿದರು. ಅವರು ಹೇಳಿದರು: ಈ ಹಣವನ್ನು ನಾನು ಅಲ್ಲಾಹನಿಗೋಸ್ಕರ ಜಮಾಯಿಸಿದ್ದೇನೆ. ಇದು ಅಲ್ಲಾಹನದ್ದೇ ಆಗಿದೆ

ನಿಷ್ಠಾವಂತರಾದ ಇನ್ನೊಬ್ಬರ ಘಟನೆ ಕೇಳಿರಿ. ನಿಶ್ಚಯವಾಗಿಯೂ ಇದು ಐಶ್ವರ್ಯವಂತರನ್ನು ಎಚ್ಚರಿಸುವಂತಹ ಘಟನೆಯಾಗಿದೆ. ಬೆನಿನ್ ದೇಶದ ಅಮೀರ್ ಬರೆಯುತ್ತಾರೆ: ಇಲ್ಲಿನ ಒಬ್ಬ ಹಳೆಯ ಅಹ್ಮದಿಯ ಹೆಸರು ಚಂದಾದಾರರ ಪಟ್ಟಿಯಲ್ಲಿದೆ. ಚಂದ ಕೊಡಲು ಅವರೊಂದಿಗೆ ಅಪೇಕ್ಷಿಸಲಾಯಿತು. ಅವರು ಮರುದಿನ ನಮ್ಮ ಮಿಶನ್ ಹೌಸಿಗೆ ಬಂದು ಹೇಳಿದರು: ನಾನು ರಾತ್ರಿ ಇಡೀ ಅಳುತ್ತಾ ಇದ್ದೆ. ತಹ್‌ರೀಕ್ ಜದೀದ್

ಚಂದ ಕೊಡಬೇಕಾಗಿದೆ ನನ್ನ ಬಳಿ ಹಣವಿಲ್ಲ ಎಂದು. ಪ್ರಾಯಶಃ ಅಲ್ಲಾಹನು ನನ್ನನ್ನು ಪರೀಕ್ಷಿಸುತ್ತಾ ಇದ್ದಾನೆ. ಅನಂತರ ಅವರು ಸ್ವಲ್ಪ ಹಣ ಚಂದವಾಗಿ ಕೊಟ್ಟರು. ಆಗ ಅವರಿಂದ ಚಂದ ಪಡಕೊಂಡ ವ್ಯಕ್ತಿ ಅವರಿಗೆ ಸಹಾಯಧನವಾಗಿ ಸ್ವಲ್ಪ ಹಣ ಕೊಟ್ಟರು. ಆಗ ಆ ವ್ಯಕ್ತಿ ಕೂಡಲೆ ಹತ್ತು ಫ್ರಾಂಕ್‌ಸೈಫ ವಾಪಾಸು ಕೊಡುತ್ತಾ ಹೇಳಿದರು–

ಇದು ನನ್ನ ಚಂದ ಆಮ್ ಬಾಕಿ ತೀರಿಸಲು ಕೊಡುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಹಾಗೆ ಶರೀರದಲ್ಲಿ ಸರಿಯಾಗಿ ಬಟ್ಟೆಬರೆಗಳಿಲ್ಲದ ಜನರ ನಿಷ್ಠೆಯ ಸ್ಥಿತಿ ಹೀಗಿದೆ. ಅವರು ನಿಷ್ಠಾವಂತಿಕೆಯಲ್ಲಿ ಬಹಳ ಮುಂದೆ ಇದ್ದಾರೆ.

ಖಾದಿಯಾನ್‌ನಿಂದ ಸಹಾಯಕ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಹೀಗೆ ಬರೆಯುತ್ತಾರೆ: ಕೊಡಿಯತ್ತೂರು ಜಮಾಅತ್‌ನಲ್ಲಿ ಜುಮುಅ ಖುತ್‌ಬದಲ್ಲಿ ತಹ್‌ರೀಕ್ ಜದೀದ್ ಚಂದದ ಪ್ರಾಮುಖ್ಯತೆಯನ್ನು ವಿವರಿಸಲಾಯಿತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಹ್‌ರೀಕ್ ಜದೀದ್ ಚಂದವನ್ನು ಆವಶ್ಯಪಟ್ಟಾಗ ಅವರ ಕರೆಗೆ ಪ್ರೀತಿಯಿಂದ ಉತ್ತರ ನೀಡಿದವರ ತ್ಯಾಗಗಳ ಬಗ್ಗೆ ವಿವರಿಸಲಾಯಿತು. ಆಗ ಅಲ್ಲಿನ ಲಜ್‌ನ ಇಮಾಇಲ್ಲಾಹ್ ಸದರ್ ತನ್ನ ಬೆಲೆ ಬಾಳುವ ಒಂದು ಚಿನ್ನದ ಬಳೆಯನ್ನು ತಹ್‌ರೀಕ್ ಜದೀದ್ ಚಂದವಾಗಿ ನೀಡಿದರು. ಅಲ್ಲಾಹನ ಅನುಗ್ರಹದಿಂದ ಧರ್ಮಕಾರ್ಯಗಳಿಗೋಸ್ಕರ ತಮಗೆ ಪ್ರಿಯವಾದ ಚಿನ್ನದೊಡವೆಗಳನ್ನು ತ್ಯಾಗ ಮಾಡುವುದು ಇಂದಿನ ಕಾಲದಲ್ಲಿ ಅಹ್ಮದಿ ಮಹಿಳೆಯರ ಮಾತ್ರ ವೈಶಿಷ್ಟ್ಯವಾಗಿದೆ. ಜರ್ಮನಿಯ ನೇಶನಲ್ ಸೆಕ್ರಟರಿ ತಹ್‌ರೀಕ್ ಜದೀದ್ ಹೀಗೆ ಬರೆದಿದ್ದಾರೆ: ಇಲ್ಲಿ ಹಲವು ಜಮಾಅತ್‌ನಲ್ಲಿ ತಹ್‌ರೀಕ್ ಜದೀದ್ ಬಗ್ಗೆ ಒಂದು ವಿಚಾರಗೋಷ್ಠಿಯನ್ನು ಜರಗಿಸಲಾಯಿತು. ಈ ವಿಚಾರಗೋಷ್ಠಿ ಮುಗಿದ ಕೂಡಲೆ ಒಬ್ಬರು ತನ್ನ ಪತ್ನಿಯ ಆಭರಣಗಳನ್ನು ತೆಗೆದುಕೊಂಡು ತಹ್‌ರೀಕ್ ಜದೀದ್ ಕಚೇರಿಗೆ ಬಂದರು. ಅವರ ಪತ್ನಿ ತನ್ನ ವಿವಾಹದ ಆಭರಣಗಳನ್ನು ತಹ್‌ರೀಕ್ ಜದೀದ್‌ಗೆ ನೀಡಲಿಕ್ಕಾಗಿ ಕೊಟ್ಟಿದ್ದರು.

ಲಾಹೋರಿನ ಅಮೀರ್ ಸಾಹೇಬರು ಬರೆಯುತ್ತಾರೆ: ಒಬ್ಬ ಮಹಿಳೆ ತಹ್‌ರೀಕ್ ಜದೀದ್ ಚಂದವಾಗಿ ಒಂದು ದೊಡ್ಡ ಮೊತ್ತ ಬರೆಯಿಸಿದ್ದರು. ಅದನ್ನು ಅವರು ಕೊಟ್ಟು ತೀರಿಸಿದ್ದರು. ಅವರೊಂದಿಗೆ ಇನ್ನಷ್ಟು ಹೆಚ್ಚು ಚಂದ ಕೊಡಲು ಅಪೇಕ್ಷಿಸಿದಾಗ ಅವರು ಹೆಚ್ಚು ತೂಕದ ಒಂದು ಚಿನ್ನದ ಬಳೆಯನ್ನು ಚಂದವಾಗಿ ಕೊಟ್ಟರು.

ನೋಡಿರಿ, ವಿವಿಧ ಜನಾಂಗಗಳ ವಿವಿಧ ದೇಶಗಳ ಜನರು ಹೇಗೆ ತ್ಯಾಗ ಮಾಡುತ್ತಿದ್ದಾರೆ. ಒಬ್ಬ ಮಹಿಳೆ ದಕ್ಷಿಣ ಭಾರತದಲ್ಲಿ ಇನ್ನೊಬ್ಬ ಮಹಿಳೆ ಪಾಕಿಸ್ಥಾನದ ಪಂಜಾಬಿನಲ್ಲಿ ಮತ್ತೋರ್ವ ಮಹಿಳೆ ಜರ್ಮನಿಯಲ್ಲಿ ವಾಸಿಸುತ್ತಿದ್ದಾರೆ. ಆದರೆ ಅವರ ತ್ಯಾಗ ಮನೋಭಾವ ಒಂದೇ ರೀತಿಯಲ್ಲಿದೆ. ಈ ಏಕತೆಯ ಮನೋಭಾವವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತಿನಲ್ಲಿ ಸೃಷ್ಟಿಸಿದ್ದಾಗಿದೆ. ಇದು ಅಲ್ಲಾಹನ ಅನುಗ್ರಹವಾಗಿದೆ. ಅಲ್ಲಾಹನು ಅಹ್ಮದಿಯರ ಮೇಲೆ ಮಾಡುವ ಅನುಗ್ರಹ ಇದಾಗಿದೆ. ಹೊಸದಾಗಿ ಬೈಅತ್ ಮಾಡಿದವರು ಸಹ ಧನ ತ್ಯಾಗದಲ್ಲಿ ಈಗ ಬಹಳ ಮುಂದುವರಿದಿದ್ದಾರೆ. ತ್ಯಾಗ ಮಾಡುವವರ ಮೇಲೆ ಅಲ್ಲಾಹನು ಅನುಗ್ರಹ ಮಾಡುತ್ತಾನೆ. ಮತ್ತು ತ್ಯಾಗಕ್ಕೆ ಎಂತಹ ಫಲ ಲಭಿಸುತ್ತದೆ ಮತ್ತು ಅದರ ಫಲವಾಗಿ ವಿಶ್ವಾಸ ಮತ್ತು ನಿಷ್ಠೆ ಹೇಗೆ ವರ್ಧಿಸುತ್ತದೆ ಎಂಬುದರ ಬಗ್ಗೆ ಕೆಲವು ಉದಾಹರಣೆಗಳು ಹೀಗಿವೆ:

ನಾಯಿಬ್ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್ ಹೀಗೆ ಬರೆಯುತ್ತಾರೆ: ಕೇರಳದ ಪತ್ತಪಿರಿಯಂ ಜಮಾಅತಿನ ಒಬ್ಬರು ಫೋನ್ ಮೂಲಕ ಹೀಗೆ ತಿಳಿಸಿದರು: ಹುಝೂರ್ ಕಳೆದ ವರ್ಷದ ಖುತುಬದಲ್ಲಿ ಆಫ್ರಿಕದ ಬಡ ಅಹ್ಮದಿಯರು ತಾವು ಬಡವರಾಗಿದ್ದರೂ ಹೆಚ್ಚು ಹಣ ಚಂದವಾಗಿ ನೀಡಿದ ಬಗ್ಗೆ ತಿಳಿಸಿದ್ದರು. ನಮಗೆ ಅನುಕೂಲತೆಗಳಿವೆ. ಆದುದರಿಂದ ನನ್ನ ತಹ್‌ರೀಕ್ ಜದೀದ್ ಚಂದ ಎರಡು ಲಕ್ಷ ವಾಗ್ದಾನ ಮಾಡಿದುದು ಬಹಳ ಕಡಿಮೆಯಾಗಿದೆ. ನನ್ನ ಚಂದ ಐದು ಲಕ್ಷವನ್ನಾಗಿ ಮಾಡಿರಿ. ಸ್ವಲ್ಪ ಕಾಲದ ನಂತರ ಅವರು ಪೂರ್ಣವಾಗಿ ಚಂದ ಹಣ ಪಾವತಿ ಮಾಡಿದರು. ಅವರು ಹೇಳಿದರು: ನನ್ನ ತಹ್‌ರೀಕ್ ಜದೀದ್ ಚಂದವನ್ನು ವರ್ಧಿಸಿದಾಗ ಅಲ್ಲಾಹನು ನನ್ನ ಉದ್ದಿಮೆಯಲ್ಲಿ ಬಹಳ ಹೆಚ್ಚು ಅನುಗ್ರಹ ನೀಡಿದನು. ಈಗ ನನ್ನ ಬಳಿ ಎಷ್ಟು ಕೆಲಸವಿದೆಯೆಂದರೆ ನನಗೆ ಅದನ್ನು ನೋಡಿಕೊಳ್ಳಲು ಬಹಳ ಕಷ್ಟವಾಗುತ್ತದೆ.

ಕರ್ನಾಟಕದಿಂದ ಇನ್ಸ್‌ಪೆಕ್ಟರ್ ತಹ್‌ರೀಕ್ ಜದೀದ್ ಇಬ್ರಾಹೀಮ್ ಸಾಹೇಬರು ಬರೆಯುತ್ತಾರೆ: ಗುಲ್ಬರ್ಗಾ ಜಮಾಅತಿನ ಒಬ್ಬ ಅಹ್ಮದಿ ತಹ್‌ರೀಕ್ ಜದೀದ್ ಚಂದವಾಗಿ ತನ್ನ ಒಂದು ತಿಂಗಳ ಆದಾಯ ಎಪ್ಪತ್ತಮೂರು ಸಾವಿರದ ಆರುನೂರು ರೂಪಾಯಿ ತಹ್‌ರೀಕ್ ಜದೀದ್ ಚಂದದ ವಾಗ್ದಾನವಾಗಿ ಬರೆಸಿದರು. ಆದರೆ ಅವರು ಹಣ ಪಾವತಿಸುವಾಗ ಒಂದು ಲಕ್ಷದ ಐನೂರ ಹನ್ನೊಂದು ರೂಪಾಯಿ ಚಂದವಾಗಿ ಕೊಟ್ಟರು. ಇದರ ಫಲವಾಗಿ ಅಲ್ಲಾಹನು ಅವರಿಗೆ ಒಂದು ಅದ್ಭುತ ತೋರಿಸಿದರು. ಒಬ್ಬ ವ್ಯಕ್ತಿ ಅವರಿಗೆ ದೊಡ್ಡ ಮೊತ್ತದ ಹಣವನ್ನು ಬಾಕಿ ಮಾಡಿಕೊಂಡಿದ್ದರು. ಈ ಹಣ ಸಿಗುವುದರ ಬಗ್ಗೆ ಪ್ರತೀಕ್ಷೆಯೇ ಇರಲಿಲ್ಲ. ಆದರೆ ಆ ವ್ಯಕ್ತಿ ಒಂದು ದಿನ ಅಚಾನಕವಾಗಿ ಬಂದು ಕ್ಷಮೆ ಕೋರುತ್ತಾ ಪೂರ್ಣವಾಗಿ ಹಣವನ್ನು ನೀಡಿದರು. ಸಾಂಪತ್ತಿಕ ತ್ಯಾಗದ ಪರಿಣಾಮವಾಗಿ ಅಲ್ಲಾಹನು ಯಾವ ರೀತಿ ಜನರ ವಿಶ್ವಾಸ ವರ್ಧಿಸುತ್ತಾನೆಂದು ನೋಡಿರಿ. ಲೋಕದ ವಿವಿಧ ಭಾಗಗಳಲ್ಲಿ ಇದರ ದೃಶ್ಯಗಳು ಕಾಣಿಸುತ್ತವೆ.

ಉಝ್ಬೆಕಿಸ್ಥಾನದ ಒಬ್ಬ ಹೊಸ ಅಹ್ಮದಿ ವಾಹಿದ್ ಊಚ್ ಸಾಹೇಬರು ಹೇಳುತ್ತಾರೆ: ನಾನು ಬೈಅತ್ ಮಾಡಿದ ನಂತರ ಚಂದ ಕೊಡಲು ಪ್ರಾರಂಭ ಮಾಡಿದಾಗ ನನ್ನ ಆದಾಯದಲ್ಲಿ ಆಶ್ಚರ್ಯಕರವಾದ ವರ್ಧನೆ ಉಂಟಾಗಿದೆ. ಈ ವರ್ಷ ನನಗೆ ಲಭಿಸಿದಷ್ಟು ಆದಾಯ ಕಳೆದ ಹದಿಮೂರು ವರ್ಷಗಳಲ್ಲಿ ನನಗೆ ಲಭಿಸಿರಲಿಲ್ಲ. ಇದು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದುದರ ಪರಿಣಾಮವೆಂದು ನನಗೆ ಪರಿಪೂರ್ಣ ದೃಢ ನಂಬಿಕೆ ಉಂಟಾಗಿದೆ.

ಹೊಸದಾಗಿ ಅಹ್ಮದಿಯರಾದವರು ಸಹ ತಮ್ಮ ನಿಷ್ಠೆಯನ್ನು ವರ್ಧಿಸುತ್ತಿದ್ದಾರೆ. ಅರಬ್ ದೇಶದ ಒಬ್ಬರು 2011 ನವೆಂಬರ್‌ನಲ್ಲಿ ಬೈಅತ್ ಮಾಡಿದ್ದರು. ಆಗ ಅವರ ಪತ್ನಿ ಬೈಅತ್ ಮಾಡಿರಲಿಲ್ಲ. ಅಲ್ಲಾಹನ ಅನುಗ್ರಹದಿಂದ ಈಗ ಬೈಅತ್ ಮಾಡಿದ್ದಾರೆ. ಈ ವರ್ಷ ಈ ಪತಿ ಪತ್ನಿ ಅಂದಾಜು ಹದಿನಾಲ್ಕು ಸಾವಿರ ಪೌಂಡ್ ತಹ್‌ರೀಕ್ ಜದೀದ್ ಚಂದವಾಗಿ ನೀಡಿದ್ದಾರೆ. ಯಾವುದೇ ಸ್ಥಳೀಯ ಜಮಾಅತ್‌ನ ಒಂದು ಕುಟುಂಬ ನೀಡಿದ ಚಂದದಲ್ಲಿ ಇದು ಅತೀ ದೊಡ್ಡ ಸಂಖ್ಯೆಯಾಗಿದೆ. ಪುರುಷರ, ಮಹಿಳೆಯರ, ಮಕ್ಕಳ ಸಾಂಪತ್ತಿಕ ತ್ಯಾಗದ ಅನೇಕ ಸಂಭವಗಳಿವೆ. ಇಂದಿನ ಕಾಲದಲ್ಲಿ ಲೋಕದ ಜನರು ಲೌಕಿಕ ಸುಖಸಂತೋಷಗಳಿಗೆ ಆದ್ಯತೆ ನೀಡುತ್ತಿರುವಾಗ ಅಹ್ಮದಿಯರು ಅಲ್ಲಾಹನ ಸಂಪ್ರೀತಿ ಗಳಿಸಲು ತ್ಯಾಗಗಳನ್ನು ಮಾಡುತ್ತಿದ್ದಾರೆ. ಯುಗಾಂಡದ ಗಾಂಗಾ

ಪ್ರದೇಶದ ಒಬ್ಬ ಮುಬಲ್ಲಿಗ್ ಬರೆಯುತ್ತಾರೆ: ನಾವು ಬೋಸೋ ಜಮಾಅತಿನ ಒಬ್ಬರೊಂದಿಗೆ ತಹ್‌ರೀಕ್ ಜದೀದ್ ಚಂದದ ವಾಗ್ದಾನ ಈಡೇರಿಸಲು ಹೇಳಿದಾಗ (ಅವರ ಬಳಿ ಬೇರೇನೂ ಇರಲಿಲ್ಲ) ಒಂದು ಹುಂಜದ ಮಾರಾಟದ ಬೆಲೆಯನ್ನು ತನ್ನ ವಾಗ್ದಾನಕ್ಕೆ ಸಮವಾಗಿ ನೀಡಿದರು.

ಅಮೇರಿಕದ ತಹ್‌ರೀಕ್ ಜದೀದ್ ನೇಶನಲ್ ಸೆಕ್ರಟರಿ ಬರೆಯುತ್ತಾರೆ: ಹನ್ನೊಂದು ವರ್ಷ ಪ್ರಾಯದ ಒಬ್ಬ ಹುಡುಗ ವೀಡಿಯೋ ಗೇಮ್ಸ್ ಖರೀದಿಸಲು ಹಣ ಜಮಾಯಿಸುತ್ತಿದ್ದ. ತಹ್‌ರೀಕ್ ಜದೀದ್ ಚಂದದ ಬಗ್ಗೆ ಹೇಳಿದಾಗ ಅವನು ವೀಡಿಯೋ ಗೇಮ್ಸ್ ಖರೀದಿಸಲು ಜಮಾಯಿಸಿದ ಒಂದು ನೂರು ಡಾಲರ್ ಹಣವನ್ನು ಚಂದವಾಗಿ ನೀಡಿದನು. ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಪ್ರತಿಜ್ಞೆ ಅವನು ಈ ರೀತಿ ಈಡೇರಿಸಿ ತೋರಿಸಿದನು.

ಯುಗಾಂಡದಿಂದ ಅಗಾಂಗಾ ಪ್ರದೇಶದ ಮುಬಲ್ಲಿಗ್ ಬರೆಯುತ್ತಾರೆ: ನಾಚೀರೆ ಜಮಾಅತಿನ ಒಬ್ಬ ಹುಡುಗ ನಮಾಝನ್ನು ಕಲಿತನು. ಈಗ ಅವನು ಅಲ್ಲಿ ನಮಾಝ್‌ಗೆ ನೇತೃತ್ವ ವಹಿಸುತ್ತಾನೆ. ಜುಮುಅ ನಮಾಝ್‌ಗೆ ಸಹ ನೇತೃತ್ವ ನೀಡುತ್ತಾನೆ. ಅಮೀರ್ ಸಾಹೇಬರು ಅವನಿಗೆ ಪ್ರೋತ್ಸಾಹ ನೀಡಲು ಬಹುಮಾನವಾಗಿ ಸ್ವಲ್ಪ ಹಣ ಕೊಟ್ಟರು. ಅವನು ಆ ಹಣವನ್ನು ತಹ್‌ರೀಕ್ ಜದೀದ್ ಚಂದವಾಗಿ ನೀಡಿದನು. ಈ ಹುಡುಗನನ್ನು ಕಂಡು ಜಮಾಅತಿನ ಇತರ ಹುಡುಗರೂ ಚಂದ ಕೊಡುವ ಆಸಕ್ತಿ ಹೊಂದಿದ್ದಾರೆ.

ಲೋಕದ ಪ್ರತಿಯೊಂದು ಮೂಲೆಗಳಲ್ಲೂ ಇಂತಹ ನಿಷ್ಠಾವಂತರನ್ನು ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೀಡುತ್ತಾ ಇದ್ದಾನೆ. ಅವರು ತ್ಯಾಗದ ಆತ್ಮವನ್ನು ಅರಿತು ಕೊಂಡಿದ್ದಾರೆ. ಇಂತಹ ಜನರು ಯಾವಾಗಲೂ ವರ್ಧಿಸುತ್ತಿರಲಿ ಎಂದು ನಾವು ಪ್ರಾರ್ಥಿಸೋಣ. ಎಲ್ಲರೂ ತಖ್ವದಲ್ಲಿ ಅಭಿವೃದ್ಧಿ ಹೊಂದುವವರಾಗಲಿ.

ಈಗ ನಾನು ತಹ್‌ರೀಕ್ ಜದೀದ್‌ನ ಹೊಸ ವರ್ಷದ ಪ್ರಕಟಣೆಯೊಂದಿಗೆ ಕಳೆದ ವರ್ಷದ ರಿಪೋರ್ಟು ನಿಮ್ಮ ಮುಂದೆ ಸಂಕ್ಷಿಪ್ತವಾಗಿ ಇಡುತ್ತೇನೆ. ಅಲ್ಲಾಹನ ಅನುಗ್ರಹದಿಂದ ತಹ್‌ರೀಕ್ ಜದೀದ್‌ನ 81ನೇ ವರ್ಷ ಅಕ್ಟೋಬರ್ 31, 2015ಕ್ಕೆ ಮುಕ್ತಾಯವಾಯಿತು. ಈಗ 82ನೇ ವರ್ಷ ಆರಂಭವಾಗಿದೆ. ನಾವು ಅದರಲ್ಲಿ ಪ್ರವೇಶಿಸಿದ್ದೇವೆ. ಲಭಿಸಿದ ವರದಿ ಪ್ರಕಾರ ಈ ವರ್ಷ ತಹ್‌ರೀಕ್ ಜದೀದ್ ಚಂದವಾಗಿ ಒಟ್ಟಿಗೆ 92 ಲಕ್ಷ 17 ಸಾವಿರ 800 ಪೌಂಡ್ ಚಂದವಾಗಿ ದೊರೆತಿದೆ– ಅಲ್‌ಹಮ್ದುಲಿಲ್ಲಾಹ್. ಈ ವಸೂಲಿ ಕಳೆದ ವರ್ಷಕ್ಕಿಂತ ಏಳು ಲಕ್ಷ ನಲ್ವತ್ತೇಳು ಸಾವಿರ ಪೌಂಡ್ ಹೆಚ್ಚಿಗೆ ಇದೆ.

(ಹುಝೂರ್ ಅನಂತರ ಚಂದ ಕೊಡುವ ಜಮಾಅತ್‌ಗಳ ಸ್ಥಿತಿ ವಿವರಿಸಿದರು.) ರಾಷ್ಟ್ರಗಳ ಪೈಕಿ ಪ್ರಥಮ ಸ್ಥಾನ ಪಾಕಿಸ್ಥಾನಕ್ಕೆ ಇದೆ. ಅನಂತರದ ಹತ್ತು ಸ್ಥಾನಗಳು ಅನುಕ್ರಮವಾಗಿ ಹೀಗಿವೆ: ಜರ್ಮನಿ, ಬ್ರಿಟನ್, ಅಮೇರಿಕ, ಕೆನಡ, ಆಸ್ಟ್ರೇಲಿಯಾ, ಭಾರತ, ಮಧ್ಯಪೂರ್ವದ ಒಂದು ದೇಶ, ಇಂಡೋನೇಶಿಯಾ, ಮಧ್ಯಪೂರ್ವದ ಇನ್ನೊಂದು ದೇಶ ಹಾಗೂ ಘಾನ.

ಭಾರತದ ಹತ್ತು ಜಮಾಅತ್‌ಗಳು ಕ್ರಮ ಪ್ರಕಾರ ಹೀಗಿವೆ: ಕರುಳಾಯಿ, ಹೈದರಾಬಾದ್, ಕೋಝಿಕ್ಕೋಡ್ (ಕಾಲಿಕೆಟ್), ಖಾದಿಯಾನ್, ಪತ್ತಪಿರಿಯಂ, ಕಣ್ಣೂರ್ ಟೌನ್, ಪಯಂಗಾಡಿ, ಕಲ್ಕತ್ತ, ಬೆಂಗಳೂರು ಮತ್ತು ತಮಿಳುನಾಡಿನ ಸೋಲೂರ್.

ತ್ಯಾಗದಲ್ಲಿ ಮುಂದಿರುವ ಭಾರತದ ಹತ್ತು ರಾಜ್ಯಗಳು ಕ್ರಮ ಪ್ರಕಾರ ಹೀಗಿವೆ: ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಜಮ್ಮು ಕಾಶ್ಮೀರ, ಒಡಿಶ, ಪಂಜಾಬು, ಬಂಗಾಳ, ದೆಹಲಿ, ಮಹಾರಾಷ್ಟ್ರ.

ಅಲ್ಲಾಹನು ತಹ್‌ರೀಕ್ ಜದೀದ್ ಚಂದ ಪದ್ಧತಿಯಲ್ಲಿ ಸೇರಿದ ಎಲ್ಲ ಜನರ ಸಂಪತ್ತಿನಲ್ಲೂ ಸಂಖ್ಯೆಯಲ್ಲೂ ಅನುಗ್ರಹ ದಯಪಾಲಿಸಲಿ ಮತ್ತು ಅವರ ನಿಷ್ಠೆಯನ್ನು ವರ್ಧಿಸಲಿ – ಆಮೀನ್.

——————————*****——————————

***Friday Sermon delivered by Hadrath Khaleefatul Masih Al Khamis** (atba)*

*at Masjid Baithul Futhuh, London on 06-11-2015.*

**Summarized by** *Majlis Ansarullah Bharat*

***Kannada Translation**: M. Ubeidullah for Kannada Desk, Qadian*

***Reviewed by:** M.P Ibrahim | **Typing:** U Basheer Ahmad*

***Published By:** Kannada Isha'at Team for Nazarath Nashr-O-Isha'ath, Qadian*

***Email**: khutuba.kannada@gmail.com*

**You can find all the Sermons archived at**: www.alislam.org/friday-sermon